ಪ್ರಶ್ನೆ ಕೇಳುವುದರೊಳಗಡೆ ಅಲ್ಲಿ ರಸ್ತೆ ಮಾಡಿದ್ದೇವೆಂದು ನಿಮಗೆ ಸ್ಪಷ್ಟವಾದ ಉತ್ತರ ಕೊಡುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ನನ್ನ ಮೇಲೆ ವಿಶ್ವಾಸ ಇಡಿ. ಯಾವುದೇ ಮುಲಾಜಿಲ್ಲದೆ ಸ್ವಾಧೀನ ಮಾಡಿಕೊಂಡು ಅಲ್ಲಿ ರಸ್ತೆ ಮಾಡುತ್ತೇವೆ. ನಿಮಗೆ ಸಮಾಧಾನ ತರುವ ರೀತಿಯಲ್ಲಿ ಕೆಲಸ ಮಾಡಿಸುತ್ತೇವೆ.

ಶ್ರೀ ಸುರೇಶ್ ಗೌಡ: ಧನ್ಯವಾದಗಳು.

ಅಧ್ಯಕ್ಷರು: ಮಾನ್ಯ ಮಾರಿಹಾಳ್ ಸುರೇಶ್ ಶಿವರುದ್ರಪ್ಪರವರೆ, ತಮ್ಮ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗವಾಗಿದೆ. ಆದ್ದರಿಂದ, ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು: ತಮ್ಮ ಪ್ರಶ್ನೆ ಮುಗಿದಿದೆ. ತಮ್ಮ ಪ್ರಶ್ನೆ ಬಂದಾಗ ತಾವು ಬಂದಿರಲಿಲ್ಲ. ಈಗ ಪ್ರಶ್ನೋತ್ತರ ಸಮಯವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಂಡ್ಯದವರ ಕಡೆಯಿಂದ ಪ್ರಶ್ನೆ ಹಾಕಿದರೆ ಮಾತ್ರ ನಮಗೆ ಸ್ಪಷ್ಟವಾದ ಉತ್ತರ ಮಾನ್ಯ ಮುಖ್ಯ ಮಂತ್ರಿಯವರಿಂದ ಬರುತ್ತದೆಂದು ಈಗ ಗೊತ್ತಾಯಿತು.

ಅಧ್ಯಕ್ಷರು: ಮಾನ್ಯ ಸಿದ್ದು ಸವದಿಯವರೆ, ತಾವು ಪ್ರಶ್ನೆ ಕೇಳಿ.

ಆಶ್ರಯ ಮನೆಗಳನ್ನು ಒದಗಿಸುವುದು

31 (393) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 01.04.2008 ರಿಂದ ಇಲ್ಲಿಯವರೆಗೆ ತೇರದಾಳ, ರಬಕವಿ–ಬನಹಟ್ಟಿ ಮತ್ತು ಮಹಾಲಿಂಗಪೂರ ಪಟ್ಟಣಗಳಿಗೆ ಮಂಜೂರು ಮಾಡಿದ ವಿವಿಧ ಯೋಜನೆಗಳಲ್ಲಿಯ ಆಶ್ರಯ ಮನೆಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು)

ಆ) ಈ ಮೂರು ನಗರಗಳಲ್ಲಿ ಇರುವ ಆಶ್ರಯ ರಹಿತ ಫಲಾನುಭವಿಗಳ ಸಂಖ್ಯೆ ಎಷ್ಟು ; ಅವರೆಲ್ಲರಿಗೆ ಯಾವ ಯೋಜನೆಗಳಲ್ಲಿ ಮನೆಗಳನ್ನು ಮಂಜೂರು ಮಾಡಲಾಗುವುದು ;

ಇ) ಈ ನಗರ ಪ್ರದೇಶಗಳಲ್ಲಿ ಬಹುತೇಕ ಆಶ್ರಯ ರಹಿತರಿಗೆ ನಿವೇಶನಗಳು ಇಲ್ಲದ ಕಾರಣ ನಿವೇಶನಗಳನ್ನು ಒದಗಿಸಲಾಗುವುದೇ?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) 2008–09 ಮತ್ತು 2009–10ನೇ ಸಾಲಿನಲ್ಲಿ ನಗರ ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರದಿಂದ ಯಾವುದೇ ಮನೆಗಳ ಗುರಿಯನ್ನು ನಿಗದಿಪಡಿಸಿರುವುದಿಲ್ಲ. 2010–11ನೇ ಸಾಲಿನಲ್ಲಿ ನಗರ ಆಶ್ರಯ ಯೋಜನೆಯನ್ನು ಮರುನಾಮಕರಣ ಮಾಡಿ **ವಾಜಪೇಯಿ ನಗರ ವಸತಿ ಯೋಜನೆ**ಯನ್ನು ಜಾರಿಗೆ ತರಲಾಗಿರುತ್ತದೆ. 2010–11ನೇ ಸಾಲಿನಲ್ಲಿ ನೀಡಲಾದ ಮನೆಗಳ ಗುರಿಯು ಈ ಕೆಳಗಿನಂತೆ ಇರುತ್ತದೆ.

ಯೋಜನೆ	ಪಟ್ಟಣಗಳು	ನೀಡಲಾದ ಮನೆಗಳು
ವಾಜಪೇಯಿ ನಗರ ವಸತಿ ಯೋಜನೆ	ತೇರದಾಳ	125
	ರಬಕವಿ–ಬನಹಟ್ಟಿ	300
	ಮಹಾಲಿಂಗಪುರ	125
ಒಟ್ಟು		**550**

ಆ) 2003ರಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಈ ಮೂರು ಪಟ್ಟಣಗಳಲ್ಲಿ ವಸತಿರಹಿತರ ಮತ್ತು ನಿವೇಶನರಹಿತರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಪಟ್ಟಣಗಳು	ವಸತಿ ರಹಿತರು	ನಿವೇಶನ ರಹಿತರು	ಒಟ್ಟು
ತೇರದಾಳ	33	113	146
ರಬಕವಿ–ಬನಹಟ್ಟಿ	944	250	1194
ಮಹಾಲಿಂಗಪುರ	1144	735	1879
ಒಟ್ಟು	**2121**	**1098**	**3219**

2003ರಲ್ಲಿ ನಡೆಸಲಾದ ಸಮೀಕ್ಷೆಯ ನಂತರ ವಿವಿಧ ವಸತಿ ಯೋಜನೆಗಳಲ್ಲಿ ಈ ಕೆಳಗಿನಂತೆ ಮನೆಗಳನ್ನು ಮಂಜೂರು ಮಾಡಲಾಗಿದೆ

ಯೋಜನೆಯ ಹೆಸರು	ನಗರ /ಪಟ್ಟಣ	ಶ್ರೇಣಿ	ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿ ಇರುವ ಮನೆಗಳು	ಪ್ರಾರಂಭವಾಗದ ಮನೆಗಳು
ನಗರ ಆಶ್ರಯ	ಮಹಾಲಿಂಗಪುರ ಪುರಸಭೆ	2005–06	276	271	5	0
	ರಬಕವಿ–ಬನಹಟ್ಟಿ ನಗರಸಭೆ		79	79	0	0
	ತೇರದಾಳ ಪುರಸಭೆ		20	15	5	0
ವಾಜಪೇಯಿ ನಗರ ವಸತಿ ಯೋಜನೆ	ಮಹಾಲಿಂಗಪುರ ಪುರಸಭೆ	2010–11	125	0	0	125
	ರಬಕವಿ–ಬನಹಟ್ಟಿ ನಗರಸಭೆ		300	0	0	300
	ತೇರದಾಳ ಪುರಸಭೆ		125	0	0	125
ಒಟ್ಟು			**925**	**365**	**10**	**550**

ಉಳಿದ ವಸತಿ ರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಈಗಾಗಲೇ ವಾಜಪೇಯಿ ನಗರ ವಸತಿ ಯೋಜನೆ ಜಾರಿಯಲ್ಲಿದ್ದು, ಈ ಯೋಜನೆಯಡಿ ಸ್ಥಳೀಯ ಸಂಸ್ಥೆಗಳಿಂದ ಹೆಚ್ಚಿನ ಮನೆ ನೀಡಲು ಬೇಡಿಕೆ ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುತ್ತದೆ.

ಕೇಂದ್ರ ಸರ್ಕಾರದ ನಗರ ಬಡಜನತೆಗೆ ವಸತಿಗಾಗಿ ಬಡ್ಡಿ ಸಹಾಯಧನ ಯೋಜನೆಯಡಿ 1.00 ಲಕ್ಷ ರೂ.ಗಳ ವರೆಗಿನ ಬ್ಯಾಂಕ್ ಸಾಲಕ್ಕೆ ಶೇಕಡ 5ರಷ್ಟು ಬಡ್ಡಿ ಸಹಾಯಧನ ಪಡೆಯಬಹುದಾಗಿದೆ. ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಮತ್ತು ನಗರ ಬಡಜನತೆಗೆ ವಸತಿ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಇ) ಹೌದು.

ನಗರ ಪ್ರದೇಶದಲ್ಲಿ ವಾಸಿಸುತ್ತಿರುವ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ವಾಜಪೇಯಿ ನಗರ ನಿವೇಶನ ಯೋಜನೆ ಜಾರಿಯಲ್ಲಿದ್ದು ಈ ಯೋಜನೆಯ ಮೂಲಕ ಹಂತಹಂತವಾಗಿ ಎಲ್ಲಾ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ 2010–11ನೇ ಸಾಲಿನಲ್ಲಿ ಈ ಕೆಳಗಿನಂತೆ ನಿವೇಶನ ರಹಿತರಿಗೆ ನಿವೇಶನ ನೀಡಲು ಗುರಿ ಹೊಂದಲಾಗಿದೆ.

ಪಟ್ಟಣಗಳು	ಗುರಿ
ತೇರದಾಳ	250
ರಬಕವಿ–ಬನಹಟ್ಟಿ	600
ಮಹಾಲಿಂಗಪುರ	250
ಒಟ್ಟು	**1100**

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ವಾಜಪೇಯಿ ಆಶ್ರಯ ಯೋಜನೆಯಡಿಯಲ್ಲಿ ಆಶ್ರಯ ರಹಿತ ಪಟ್ಟಿಯನ್ನು ಹಾಗೂ ಗುಡಿಸಲು ರಹಿತರ ಪಟ್ಟಿಯನ್ನು ನಾವು ಈಗಾಗಲೇ ಜಿಲ್ಲಾಧಿಕಾರಿ ಮುಖಾಂತರ ಕಳುಹಿಸಿದ್ದೇವೆ. ಆದರೆ, ಇದುವರೆಗೆ ಪ್ರಾರಂಭವಾಗಿಲ್ಲ. ಆದ್ದರಿಂದ, ತಕ್ಷಣ ಪ್ರಾರಂಭಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ವಸತಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮಿತ್ರರಾಗಿರುವ ಮಾನ್ಯ ಸಿದ್ದು ಸವದಿಯವರು ಕೇಳಿರುವ ಎಲ್ಲಾ ಪ್ರಶ್ನೆಗೆ ನಾವು ಉತ್ತರ ಕೊಟ್ಟಿದ್ದೇವೆ. ಆಶ್ರಯ ಮನೆಗಳ ಬಗ್ಗೆ ಎಲ್ಲಾ ತಾಲ್ಲೂಕುಗಳ ಅಧಿಕಾರಿಗಳಿಗೆ ನಾವು ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಕೆಲಸ ಪ್ರಾರಂಭ ಮಾಡುವುದಕ್ಕೆ ತಮಗೆ ಪಟ್ಟಿ ಬೇಕಾಗಿದೆ. 2010ರೊಳಗಡೆ ಬಂದಿರುವಂಥ ಎಲ್ಲಾ ಪಟ್ಟಿಗಳಿಗೆ ನಾವು ಅನುಮತಿ ಕೊಡುವುದರ ಬಗ್ಗೆ ಇನ್ನು ಎರಡು–ಮೂರು ದಿವಸಗಳಲ್ಲಿ ಸರ್ಕಾರದ ಆದೇಶವನ್ನು ಹೊರಡಿಸುತ್ತೇವೆ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಇನ್ನೊಂದು ಪ್ರಶ್ನೆ ಏನೆಂದರೆ, ವಾಜಪೇಯಿ ಆಶ್ರಯದಲ್ಲಿ 50 ಸಾವಿರ ಸಬ್ಸಿಡಿ ಮತ್ತು 50 ಸಾವಿರ ರೂಪಾಯಿ ಲೋನ್ ಹಾಗೂ ಉಳಿದ 30 ಸಾವಿರ ರೂಪಾಯಿಗಳನ್ನು ಸಂಬಂಧಪಟ್ಟ

ಫಲಾನುಭವಿ ತುಂಬಬೇಕೆಂದು ಮಾಡಲಾಗಿದೆ. ಬಹುಶಃ ಕೂಲಿ ಕಾರ್ಮಿಕರಿಗೆ ಮತ್ತು ಬಡ ಫಲಾನುಭವಿಗಳಿಗೆ ಇದು ಭಾರವಾಗುತ್ತದೆ. ಆದ್ದರಿಂದ, labour charges ನಲ್ಲಿ ಅಡ್ಜೆಸ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ವಿನಂತಿಯನ್ನು ತಮ್ಮ ಮುಖಾಂತರ ಮಾಡಿಕೊಳ್ಳುತ್ತೇನೆ. ಎರಡನೆಯದು ಏನೆಂದರೆ, ನಮ್ಮ ಮನೆ ಯೋಜನೆಯಲ್ಲಿ ನಾವು ಫಲಾನುಭವಿಗಳನ್ನು ಆಯ್ಕೆ ಮಾಡಿ ಆಯಾಯ ಬ್ಯಾಂಕ್‌ಗಳಿಗೆ ಪಟ್ಟಿಯನ್ನು ಸಲ್ಲಿಸಿದ್ದೇವೆ. ನಮ್ಮ ಮನೆ ಯೋಜನೆಯಡಿಯಲ್ಲಿ ಒಂದು ಬ್ಯಾಂಕ್‌ನವರು ಸಹ ಸಾಲ ಕೊಡುವುದಕ್ಕೆ ಮುಂದೆ ಬಂದಿಲ್ಲ. ಸಾಲ ಕೊಟ್ಟಿರುವ ಒಂದು ಉದಾಹರಣೆ ಕೂಡ ಇಲ್ಲ. ಅದರ ಬಗ್ಗೆ ಕೂಡ ತಾವು ಆಲೋಚನೆ ಮಾಡಿ ಬ್ಯಾಂಕ್‌ಗಳಿಗೆ ಟಾರ್ಗೆಟ್ ನಿಗದಿ ಮಾಡಿ ಲೋನ್ ಕೊಡುವುದಕ್ಕೆ ಆದೇಶವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೈಟ್ ವಿತರಣೆ ಬಗ್ಗೆ ಹೇಳುವುದಾದರೆ, ನಗರ ಸಭೆ ವ್ಯಾಪ್ತಿ ಅಥವಾ ಗ್ರಾಮಾಂತರ ಮಟ್ಟದಲ್ಲಿ ಜಮೀನಿನ ಬೆಲೆ ಬಹಳಷ್ಟು ಜಾಸ್ತಿಯಾಗಿದೆ. ಸರ್ಕಾರ ನಿಗದಿ ಮಾಡಿರುವ ಹಣದಲ್ಲಿ ಜಮೀನನ್ನು ಕೊಡುವಂಥ ಪರಿಸ್ಥಿತಿ ಎಲ್ಲಿಯೂ ಕೂಡ ಇಲ್ಲ. ಆ ಕಾರಣಕ್ಕಾಗಿ ಜಮೀನಿನ ಬೆಲೆಯನ್ನು ಸರ್ಕಾರ ನಿಗದಿ ಮಾಡುವಂಥ ಅನುದಾನವನ್ನು ಹೆಚ್ಚು ಮಾಡಬೇಕು. ವಸತಿ ರಹಿತರು ಎಲ್ಲೆಲ್ಲಿದ್ದಾರೆಯೋ ಅಲ್ಲಿ ಭೂ ಸ್ವಾಧೀನ ಮಾಡಿಕೊಂಡು ಫಲಾನುಭವಿಗಳಿಗೆ ಸೈಟ್ ಹಂಚಿಕೆ ಮಾಡಿ ಮನೆಗಳನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ವಾಜಪೇಯಿ ವಸತಿ ಯೋಜನೆ ಪ್ರಾರಂಭ ಮಾಡಿದ್ದು, ಫಲಾನುಭವಿಯ ಜಾಗ ಇದ್ದರೆ ಆ ಜಾಗಕ್ಕೆ ನಾವು 50 ಸಾವಿರ ರೂಪಾಯಿ ಸಬ್ಸಿಡಿ ಮತ್ತು ಉಳಿದ 50 ಸಾವಿರ ರೂಪಾಯಿಗೆ 3% ಬಡ್ಡಿ ದರದಲ್ಲಿ ಸಾಲ ಕೊಡಿಸುವುದು ಮತ್ತು ಬಾಕಿಯಿರುವ 35 ಸಾವಿರ ರೂಪಾಯಿಗಳನ್ನು ಫಲಾನುಭವಿಗಳು ಹಾಕುವಂಥ ಕೆಲಸವನ್ನು ನಾವು ಮಾಡಿದ್ದೇವೆ. ವಾಜಪೇಯಿ ವಸತಿ ಯೋಜನೆಗೆ 60 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 50 ಸಾವಿರ ಮನೆಗಳನ್ನು ಈ ಸಾರಿ ಕಟ್ಟಲಕ್ಕಂಥ ಗುರಿಯನ್ನು ಹೊಂದಿದ್ದೇವೆ. ಮಾನ್ಯ ಸಿದ್ದು ಸವದಿಯವರು ಹೇಳಿದ ಹಾಗೆ, 50 ಸಾವಿರ ರೂಪಾಯಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುವಂಥದನ್ನು ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. 3% ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ನಾವು ಈಗಾಗಲೇ ಬ್ಯಾಂಕ್‌ಗಳನ್ನು ಗುರುತಿಸಿದ್ದೇವೆ. ರಾಷ್ಟ್ರೀಕೃತ

ಬ್ಯಾಂಕ್‌ಗಳು ಕೂಡ ಅಲ್ಲಿಗೆ ಬಂದು ಫಲಾನುಭವಿಗಳ ಹೆಸರಿನಲ್ಲಿ ಕೊಡುತ್ತಾರೆ. ಎರಡನೆ ವಿಚಾರ ಏನೆಂದರೆ, ಈಗ ನಮ್ಮ ಮನೆ ನಮ್ಮ ಸ್ವತ್ತು ಎಂಬ ಕಾರ್ಯಕ್ರಮ ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದು, ಸಾವಿರಾರು ಕೋಟಿ ರೂಪಾಯಿಗಳಷ್ಟು ಬಡ್ಡಿ ಜಾಸ್ತಿಯಾಗಿದ್ದರಿಂದ ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಬಜೆಟ್‌ನಲ್ಲಿ ಹೇಳಿದ್ದಾರೆ. ಇನ್ನು 15–20 ದಿವಸಗಳಲ್ಲಿ ಎಲ್ಲಾ ಬ್ಯಾಂಕ್‌ಗಳು ಹಣವನ್ನು ಬಿಡುಗಡೆ ಮಾಡತಕ್ಕಂಥದ್ದಕ್ಕೆ ನಾವೊಂದು ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ಇನ್ನು ಮೂರ್ನಾಲ್ಕು ದಿನಗಳಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಈ ಸದನ ಮುಗಿಯುವುದಕ್ಕಿಂತ ಮುಂಚಿತವಾಗಿಯೇ ಪ್ರತಿಯೊಂದು ಕ್ಷೇತ್ರಕ್ಕೂ ಕೂಡ ಅದರ ಬಗ್ಗೆ ಸೂಚನೆ ನೀಡುವಂಥ ಕೆಲಸವನ್ನು ಮಾಡುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 01.03.2011ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 46 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–1)

– – – –

ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತಾರೆ, ಅದು ಯಾವ ಇಲಾಖೆಗೆ ಹಸ್ತಾಂತರವಾಗಿದೆ.

ಅಧ್ಯಕ್ಷರು: ಆಗಲೇ ಹೇಳಿದೆ. ನಿಮ್ಮ ಪ್ರಶ್ನೆ ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.

ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ: ಉತ್ತರ ಯಾವಾಗ ಕೊಡುತ್ತಾರೆ.

ಅಧ್ಯಕ್ಷರು: ಮುಂದಿನ ಸೋಮವಾರ ಉತ್ತರವನ್ನು ಕೊಡುತ್ತೇವೆಂದು ಹೇಳಿರುತ್ತಾರೆ. ತಮಗೆ ಆಗಲೇ ಹೇಳಿದೆ.

2. ವರದಿಗಳನ್ನೊಪ್ಪಿಸುವುದು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ ಇವರ ಪರವಾಗಿ ಶ್ರೀ 1ಸಿದ್ದು ಸವದಿ (ತೇರದಾಳ): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ ಕೃಷ್ಣಾಭಾಗ್ಯ ಜಲ ನಿಗಮ ನಿಯಮಿತಕ್ಕೆ ಸಂಬಂಧಿಸಿದ 122ನೇ ವರದಿ ಹಾಗೂ ಕರ್ನಾಟಕ ರಾಜ್ಯ